ಬೂಟಾಟಿಕೆ, ಸುಳ್ಳು ಹಾಗೂ ವ್ಯಕ್ತಿವಾದ ಬೆಳೆಯುತ್ತವೆಂದು ರಾಜ್‌ನಾರಾಯಣ್ ಮತ್ತಿತರರಿಗೆ ತಿಳಿ ಹೇಳುವ ಪ್ರಯತ್ನ ಮಾಡಿದೆ' ಎಂದು ಲೋಹಿಯಾ ಬರೆಯುತ್ತಾರೆ.

'ಹೋರಾಟದ ಬೇರೆ ಬೇರೆ ಸಾಮಾಜಿಕ ಮಾದರಿಗಳನ್ನು ಚಾಲ್ತಿಗೆ ತರಬೇಕು' ಎಂದ ಲೋಹಿಯಾ, ಸತ್ಯಾಗ್ರಹದ ಹೊಸ ಬಗೆಯೊಂದನ್ನು ಸೂಚಿಸಿದರು:

'ಹರಿಜನರು ವಿಶ್ವನಾಥ ಮಂದಿರವನ್ನು ಪ್ರವೇಶಿಸುವ ಕಾರ್ಯಕ್ರಮ ಮಾಡಲು ನಾವು ಕಾಶಿ ನಗರದಲ್ಲಿ ಅಕ್ಟೋಬರ್ 1ರಂದು ಅಖಿಲ ಭಾರತ ಸಮ್ಮೇಳನ ಕರೆಯುವುದರ ಬಗ್ಗೆ ಯೋಚಿಸುತ್ತಿದ್ದೇವೆ. ಮೊದಲು ತರ್ಕದ ಮೂಲಕ ದೇವಸ್ಥಾನದ ಆಡಳಿತ ವರ್ಗದ ಮನ ಒಲಿಸಬೇಕು; ಅದು ಸಾಧ್ಯವಾಗದಿದ್ದರೆ ಸಮ್ಮೇಳನದ ಪ್ರತಿನಿಧಿಗಳು ಅದೇ ದಿನ ಅಥವಾ ಮಾರನೆಯ ದಿನ ವಿಶ್ವನಾಥ ಮಂದಿರವನ್ನು ಶಾಂತ ರೀತಿಯಿಂದ ಮುತ್ತಿಗೆ ಹಾಕಲು ಸಿದ್ಧರಿರಬೇಕು.

ಇದೊಂದು ಸರಳವಾದ ಕ್ರಮ: ಹರಿಜನರನ್ನು ಮಂದಿರ ಪ್ರವೇಶ ಮಾಡದಂತೆ ತಡೆದರೆ, ಬೇರೆ ಎಲ್ಲರನ್ನೂ ಮಂದಿರ ಪ್ರವೇಶಿಸದಂತೆ ತಡೆಯುವುದು. ಹರಿಜನ ಮಂದಿರ ಪ್ರವೇಶ ಸಮಿತಿ ನನ್ನ ಸಲಹೆಯನ್ನು ಒಪ್ಪಿಕೊಳ್ಳುತ್ತದೆಂದು ಆಶಿಸುತ್ತೇನೆ. ಯಾವುದೇ ಸಂಸತ್ತನ್ನು ಈ ಬನಾರಸ್ ಪ್ರಕರಣದಂಥದ್ದು ಸೋಲಿಸಿದ ಉದಾಹರಣೆಯಿಲ್ಲ. ಸಂಸತ್ತಿನ ಸಾರ್ವಭೌಮತ್ವಕ್ಕೆ ಸವಾಲು ಎದುರಾಗಿದೆ.'

ಆಗ ವಿಶ್ವನಾಥ ದೇವಾಲಯ ಪ್ರವೇಶ ಚಳುವಳಿಯಲ್ಲಿ ಭಾಗಿಯಾದ ಉಳಿದ ನಾಗರಿಕರ ಜೊತೆಸಮಾಜವಾದಿಗಳೂಲಾಠಿಯೇಟುತಿಂದರು; ಬಂಧನ ಅನುಭವಿಸಿದರು. ಕೊನೆಗೂ ಉತ್ತರ ಪ್ರದೇಶ ಸರ್ಕಾರ ತಲೆಬಾಗಲೇಬೇಕಾಯಿತು.

ಈ ಕುರಿತು ಸಮಾಜವಾದಿ ಪಕ್ಷ ನೀಡಿದ ಪ್ರಕಟಣೆ:

'ಹರಿಜನರ ಹಕ್ಕನ್ನು ದೊರಕಿಸಿ ಕೊಡಲು ಬನಾರಸ್‌ನಲ್ಲಿ ನಡೆದ ಆಂದೋಲನ ಅದೆಷ್ಟು ಯಶಸ್ವಿಯಾಯಿತೆಂದರೆ, ಸರಕಾರ ತನ್ನ ಸಾಂಪ್ರದಾಯಿಕ ಒಲವುಗಳನ್ನು ಬಚ್ಚಿಡಲು ಹೊಸ ವಿಧೇಯಕ ತರಲೇಬೇಕಾಯಿತು. ವಿಶ್ವನಾಥ ಮಂದಿರದ ಆಂದೋಲನ ರಾಷ್ಟ್ರವ್ಯಾಪಿ ಮಹತ್ವ ಪಡೆಯಿತೆಂಬುದು ಇದರಿಂದ ಗೊತ್ತಾಗುತ್ತದೆ.

ದಸ್ತಗಿರಿಯಾಗುವುದರ ಮೂಲಕ, ಹೊಡೆತ ತಿನ್ನುವುದರ ಮೂಲಕ ಸರಕಾರ ಅಸ್ಪೃಶ್ಯತೆಯನ್ನು ನಿವಾರಿಸಲು ಕ್ರಮ ಕೈಕೊಳ್ಳುವಂತೆ ಎಚ್ಚರಿಸಿದ ಉತ್ತರ ಪ್ರದೇಶದ ನಾಗರಿಕರನ್ನು, ವಿಶೇಷವಾಗಿ ಸಮಾಜವಾದಿಗಳನ್ನು, ಸಮಾಜವಾದಿ ಪಕ್ಷದ ರಾಷ್ಟ್ರೀಯ ಸಮಿತಿ ಅಭಿನಂದಿಸುತ್ತದೆ.'

ಇದರ ಜೊತೆಗೇ ಈ ಪ್ರಕಟಣೆ ದಲಿತರಿಗೂ ಎಚ್ಚರಿಕೆಯ ಮಾತು ಹೇಳಿತ್ತು: 'ತಮ್ಮೊಳಗೇ ಪ್ರಚಲಿತವಿರುವ ಮೇಲು ಕೀಳಿನ ಭಾವನೆಯನ್ನು ತ್ಯಜಿಸಲು ಹರಿಜನರು ತಾವಾಗಿಯೇ ಶೀಘ್ರವೇ ಮುಂದೆ ಬರುತ್ತಾರೆಂದು ಕೂಡ ಪಕ್ಷದ ರಾಷ್ಟ್ರೀಯ ಸಮಿತಿ ನಿರೀಕ್ಷಿಸುತ್ತದೆ.'

ಇಷ್ಟಾಗಿಯೂ ಹೋರಾಟ ರಾಜಕಾರಣ, ಸಾಮಾಜಿಕ ನ್ಯಾಯದ ರಾಜಕಾರಣಗಳನ್ನು ಚುನಾವಣೆಗಳಲ್ಲಿ ಬೆಂಬಲಿಸುವಷ್ಟು ಜಾಗೃತಿ ಮತದಾರ, ಮತದಾರ್ತಿಯರಲ್ಲಿ ದೊಡ್ಡ ಮಟ್ಟದಲ್ಲಿ ಹುಟ್ಟಿರಲಿಲ್ಲ. ಆದರೂ 1957ರ ಚುನಾವಣೆಯಲ್ಲಿ 33 ಲೋಕಸಭಾ ಚುನಾವಣೆಗಳಲ್ಲಿ ಸ್ಪರ್ಧಿಸಿದ ಪಕ್ಷ 9 ಸ್ಥಾನ ಗೆದ್ದಿತ್ತು; 335 ವಿಧಾನಸಭಾ ಕ್ಷೇತ್ರಗಳಿಗೆ ಸ್ಪರ್ಧಿಸಿ 55 ಸ್ಥಾನ ಗೆದ್ದಿತ್ತು. ಸಮಾಜವಾದಿ ಪಕ್ಷವೆಂದರೆ 'ಹೋರಾಡುವ ಪಕ್ಷ' ಎಂಬ ಇಮೇಜ್ ಬೆಳೆದಿತ್ತು. ಆ ಘಟ್ಟದಲ್ಲಿ ಪಕ್ಷದ ಕಾರ್ಯಕರ್ತರಿಗೆ, 'ನೂರು ವರ್ಷಗಳ ಹೋರಾಟ; ಏಳು ವರ್ಷಗಳಲ್ಲಿ ಅಧಿಕಾರ' ಎಂಬ ಗುರಿಯನ್ನು ಲೋಹಿಯಾ ಕೊಟ್ಟರು.

ನವೆಂಬರ್ 1957. ವಾಣಿಜ್ಯ ತೆರಿಗೆಗೆ ಸಂಬಂಧಿಸಿದ ಅನ್ಯಾಯದ ವಿರುದ್ಧ ಲೋಹಿಯಾ ಲಕ್ನೋದ ವಾಣಿಜ್ಯ ತೆರಿಗೆ ಕಚೇರಿಯ ಎದುರು ಕಾರ್ಯಕರ್ತರ ಜೊತೆ ಪ್ರತಿಭಟನೆ ಮಾಡಿದರು. ಲೋಹಿಯಾ ಬಂಧನವಾಯಿತು. ಮ್ಯಾಜಿಸ್ಟ್ರೇಟರ ಎದುರು ಹಾಜರುಪಡಿಸದೆಯೇ ಲೋಹಿಯಾರನ್ನು ಹದಿನೈದು ದಿನ ಜೈಲಿಗೆ ಕಳಿಸಲಾಯಿತು. ಲೋಹಿಯಾ ಹೈಕೋರ್ಟ್ ಮೊರೆ ಹೋದರು.

ಹದಿನೈದು ದಿನಗಳ ನಂತರ ಪೊಲೀಸರು ಲೋಹಿಯಾರನ್ನು ಕೋರ್ಟಿಗೆ ಒಯ್ಯಲು ಬಂದಾಗ ಲೋಹಿಯಾ ಹೇಳಿದರು: 'ನಾನು ಬರುವುದಿಲ್ಲ. ನೀವು ಕಾನೂನಿಗೆ ವಿರುದ್ಧವಾದ ಸೆರೆಮನೆವಾಸಗಳ ಫ್ಯಾಕ್ಟರಿ ಶುರು ಮಾಡಿದ್ದೀರೇನು?'

ಇದಾದ ಹನ್ನೆರಡು ದಿನಗಳ ನಂತರ ಮ್ಯಾಜಿಸ್ಟ್ರೇಟರೇ ಠಾಣೆಗೆ ಬಂದರು. 'ಹೈಕೋರ್ಟಿನಲ್ಲಿರುವ ಪ್ರಕರಣ ಇತ್ಯರ್ಥವಾಗುವ ತನಕ ನಾನು ಮ್ಯಾಜಿಸ್ಟ್ರೇಟರ ಮುಂದೆ ಹಾಜರಾಗುವುದಿಲ್ಲ' ಎಂದರು ಲೋಹಿಯಾ.

ಇದ್ದಕ್ಕಿದ್ದಂತೆ ಮೂವತ್ತು, ಮೂವತ್ತೈದು ಜನ ಕೈದಿಗಳ ಜೊತೆ ಹತ್ತಾರು ವಾರ್ಡರುಗಳು ಲೋಹಿಯಾ ಮೇಲೆರಗಿದರು; ಅವರನ್ನು ಬಲವಂತವಾಗಿ ಕುರ್ಚಿಯ ಮೇಲೆ ಕೂರಿಸಿ ಮ್ಯಾಜಿಸ್ಟ್ರೇಟರ ಬಳಿ ಹೊತ್ತೊಯ್ದರು. ಪೊಲೀಸರ ಹಿಂಸೆಗೊಳಗಾಗಿದ್ದ ಅಸಹಾಯಕ ಸತ್ಯಾಗ್ರಹಿಗಳು ಆಗ ಲೋಹಿಯಾ ಕಣ್ಣಿಗೆ ಬಿದ್ದರು. ಲೋಹಿಯಾ ಮ್ಯಾಜಿಸ್ಟ್ರೇಟರ ಎದುರು ಯಾವುದೇ ಮಾತನ್ನಾಡಲು ನಿರಾಕರಿಸಿದರು.

ಸಂವಿಧಾನ ಕೊಟ್ಟಿರುವ ವಾಕ್ ಸ್ವಾತಂತ್ರ್ಯದಲ್ಲಿ ಮಾತಾಡದೆ ಮೌನವಾಗಿರುವ ಸ್ವಾತಂತ್ರ್ಯವೂ ಅಡಕವಾಗಿದೆಯಲ್ಲವೆ?

ಆದರೆ ಮ್ಯಾಜಿಸ್ಟ್ರೇಟರ ಜೊತೆಗಿದ್ದ ಮೂವರು ಪೇಪರೊಂದರ ಮೇಲೆ ಬಲವಂತವಾಗಿ ಲೋಹಿಯಾರ ಹೆಬ್ಬೆಟ್ಟನ್ನು ಒತ್ತಿಸಿದರು.

ಈ ಕ್ರೌರ್ಯ ಕುರಿತು ಲೋಹಿಯಾ ಉತ್ತರ ಪ್ರದೇಶದ ಬಂದಿಖಾನೆ ಸಚಿವರಿಗೆ ಪತ್ರ ಬರೆದರು:

'ನೀವು ಕಾನೂನಿನ ಪ್ರಕಾರ ನಡೆಯುತ್ತಿದ್ದೀರಾ ಹೇಗೆ? ನೀವೇ ವಿವರಿಸಿರುವಂತಹ ಕಾನೂನಿಗೆ ಅನುಗುಣವಾಗಿ ನಿಮ್ಮ ನಡವಳಿಕೆ ಇದೆಯೆ? ಹತ್ತಿಪ್ಪತ್ತು ಜನ ನನ್ನನ್ನು ಸುತ್ತುವರಿಯುವಂತೆ ಮಾಡಿ ಒತ್ತಾಯಪೂರ್ವಕವಾಗಿ ನಾನು ಮ್ಯಾಜಿಸ್ಟ್ರೇಟರ ಎದುರಿಗೆ ಕೂರುವಂತೆ ಬಲವಂತ ಮಾಡಿದಿರಲ್ಲ, ಅದು ಯಾವ ಕಾನೂನಿನ ಪ್ರಕಾರ ಎಂಬುದನ್ನು ಮೊದಲು ನನಗೆ ಹೇಳಿ?

